binding on the part of the Government to provide drinking water. you are commit to that.

ಶ್ರೀ ಆರ್. ಎಲ್. ಜಾಲಪ್ಪ : ಮಾನ್ಯ ಅಧ್ಯಕ್ಷರೇ, ತಾವು ಕೋಲಾರ ಜಿಲ್ಲೆಯಿಂದ ಬರುತ್ತಾ ಇದ್ದೀರಿ. ಅಲ್ಲೂ ಇದೇ ಸಮಸ್ಯೆ ಇದೆ. ಕೆರೆಗಳಲ್ಲಿ ಎಲ್ಲೂ ನೀರಿಲ್ಲ, ಬೆಂಗಳೂರು ಜಿಲ್ಲೆಯಲ್ಲೆಲ್ಲೂ ಕೆರೆಗಳಲ್ಲಿ ನೀರಿಲ್ಲ, ಚಿತ್ರದುರ್ಗದಲ್ಲಿ ಕೆರೆಗಳಲ್ಲಿ ನೀರಿಲ್ಲ, ರಾಯಚೂರಿನಲ್ಲಿ ಅರ್ಧ ಭಾಗದಲ್ಲಿ ಒಂದು ತೊಟ್ಟು ನೀರಿಲ್ಲ, ಎಲ್ಲಾ ಕಡೆ ಈ ಸಮಸ್ಯೆ ಇದೆ. ನಾವು ಈಗಾಗಲೇ ಯೋಚನೆ ಮಾಡಿದ್ದೇವೆ. ಕಂಟಿಂಜೆನ್ಸಿ ಬರುತ್ತದೆ, ಇದಕ್ಕೆ ತಯಾರಾಗಬೇಕು ಎಂದು ನಮ್ಮ ಮಂತ್ರಿಮಂಡಲದ ಸಭೆಯಲ್ಲಿ ಕೂಡ ಈಗಾಗಲೇ ಚರ್ಚೆ ಮಾಡಿದ್ದೇವೆ. ಮಾರ್ಚಿನಿಂದ ಸಮಸ್ಯೆ ಶುರುವಾಗುತ್ತದೆ. ಇದಕ್ಕೆ ಹಣ ಯಾವ ರೀತಿ ಒದಗಿಸಬೇಕು ಎಂಬ ಬಗ್ಗೆ ಕೂಡ ನಾವು ಯೋಚನೆ ಮಾಡಿದ್ದೇವೆ. ತಮಗೆ ತೊಂದರೆಯಾಗದ ಹಾಗೆ ಸರ್ಕಾರ ಶಕ್ತಿ ಮೀರಿ ಪ್ರಯತ್ನ ಮಾಡುತ್ತದೆಂದು ಮಾನ್ಯ ಸದಸ್ಯರಿಗೆ ಆಶ್ವಾಸನೆ ಕೊಡುತ್ತೇನೆ.

ನಿಯಮ 351ರ ಅಡಿಯಲ್ಲಿ ಬಂದಿರುವ ಸೂಚನೆಗಳು

1. ತೀರ್ಥಹಳ್ಳಿ ತಾಲ್ಲೂಕು ರೈತರು ನೀರೆತ್ತುವ ವಿದ್ಯುತ್ ಮೋಟಾರುಗಳನ್ನು ಅಳವಡಿಸಲು ಸಾಲ ಮಂಜೂರಾಗಿದ್ದರೂ ವಿದ್ಯುತ್ ಸರಬರಾಜು ಇಲ್ಲದೆ ತೊಂದರೆ.

ಶ್ರೀ ಅರಗಂ ಜ್ಞಾನೇಂದ್ರ (ತೀರ್ಥಹಳ್ಳಿ) : ತೀರ್ಥಹಳ್ಳಿ ತಾಲ್ಲೂಕು ರೈತರು ನೀರೆತ್ತುವ ವಿದ್ಯುತ್ ಮೋಟಾರುಗಳನ್ನು ಅಳವಡಿಸಲು ಸಾಲ ಮಾಡಿದ್ದು ಇಲಾಖೆಯಿಂದ ಮಂಜೂರಾತಿಯಾದರೂ ತಂತಿ ಮತ್ತು ಕಂಬಗಳ ಸರಬರಾಜು ಇಲ್ಲದ್ದರಿಂದ 1992ರಿಂದ ಇದುವರೆಗೆ ಸುಮಾರು 300 ಜನ ರೈತರಿಗೆ ತೀವ್ರ ತೊಂದರೆಯಾಗಿದೆ. ದಯಮಾಡಿ ಈ ಬಗ್ಗೆ ಶೀಘ್ರ ಗಮನ ಕೊಟ್ಟು ಇಲಾಖೆಯಿಂದ ತೀರ್ಥಹಳ್ಳಿ ತಾಲ್ಲೂಕಿಗೆ ಬೇಕಾದಷ್ಟು ತಂತಿ ಮತ್ತು ಕಂಬಗಳನ್ನು ಸರಬರಾಜು ಮಾಡಿಸಿ ಸಾಲ ಮಂಜೂರಾದ ರೈತರ ಮೋಟಾರುಗಳಿಗೆ ವಿದ್ಯುತ್ ಅಳವಡಿಸಲು ಆದೇಶಿಸಬೇಕೆಂದು ವಿನಂತಿಸುತ್ತೇನೆ.

ಶ್ರೀ ಜೆ. ಎಚ್. ಪಟೇಲ್ (ಉಪ ಮುಖ್ಯ ಮಂತ್ರಿಗಳು): ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಈ ರೀತಿ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆ. ಈಗ ಅದನ್ನು ಸರಿಪಡಿಸುವುದಕ್ಕೆ ನಾನು 5ನೇ ತಾರೀಖು ಶಿವಮೊಗ್ಗಕ್ಕೆ ಹೋದಾಗ ಮಾನ್ಯ ಸದಸ್ಯರನ್ನು ಕರೆಯಿಸಿ ಆ ವಿಭಾಗದ ಅಧಿಕಾರಿಯನ್ನೂ ಕರೆಯಿಸಿ ತಕ್ಷಣ ಪರಿಹಾರ ಮಾಡುವುದಕ್ಕೆ ಏನು ಸಾಧ್ಯವೋ ಹಾಗೂ ದೀರ್ಘಕಾಲಿಕವಾಗಿ ಏನು ಮಾಡುವುದಕ್ಕೆ ಸಾಧ್ಯವೋ ಎಂಬುದನ್ನು ಅಲ್ಲಿ ಹೇಳುತ್ತೇನೆ.

2. ಮಂಗಳೂರು ಮಹಾನಗರಪಾಲಿಕಾ ಕ್ಷೇತ್ರದಲ್ಲಿ ಕುಡಿಯುವ ನೀರಿನ ಅಭಾವ:

ಶ್ರೀ ಎಂ. ಯೋಗೀಶ್ ಭಟ್ಟ್ (ಮಂಗಳೂರು) ಮಾನ್ಯ ಅಧ್ಯಕ್ಷರೆ, ಮಂಗಳೂರು ಮಹಾನಗರಪಾಲಿಕೆ ಕ್ಷೇತ್ರದಲ್ಲಿ ಕುಡಿಯುವ ನೀರಿನ ಅಭಾವ ತೀವ್ರವಾಗಿದ್ದು ಅದನ್ನು ಶೀಘ್ರ ಪರಿಹಾರ ಮಾಡಲು ಸರಕಾರ ತಕ್ಷಣ ಗಮನ ವಹಿಸಬೇಕೆಂದೂ ಈ ನಿಟ್ಟಿನಲ್ಲಿ ತುಂಬೆಯಲ್ಲಿರುವ ಪಂಪಿಂಗ್ ಸ್ಟೇಷನ್ ನಲ್ಲಿ 27 ವರ್ಷಗಳ ಹಿಂದೆ ಇರುವ ಹಳೆಯ ವಿದ್ಯುತ್ ಪಂಪನ್ನು ಬದಲಿಸಿ ಹೊಸ ವಿದ್ಯುತ್ ಪಂಪ್‌ಗಳನ್ನು ಜೋಡಿಸಲು 1 ಕೋಟಿ ರೂಪಾಯಿಗಳನ್ನು ಹಾಗೂ ತುರ್ತಾಗಿ ಬೋರ್‌ವೆಲ್ (ಕೊಳವೆ ಬಾವಿಗಳು) ಹಾಗೂ ಸ್ಟೋರೇಜ್ ಟ್ಯಾಂಕುಗಳನ್ನು ಕಟ್ಟಲು ಕಾಮಗಾರಿಗೆ ಇನ್ನೊಂದು ಕೋಟಿ

ರೂಪಾಯಿ ಸಹಾಯಧನವನ್ನು ಮಂಗಳೂರು ಮಹಾನಗರಪಾಲಿಕೆಗೆ ಕೊಡಬೇಕೆಂದೂ ಕರ್ನಾಟಕ ರಾಜ್ಯ ಸರಕಾರವನ್ನು ಈ ಸಭೆಯ ಮೂಲಕ ವಿನಂತಿಸುತ್ತೇನೆ.

ಶ್ರೀ ವೈಜ್ಯನಾಥ ಪಾಟೀಲ್ (ನಗರಾಭಿವೃದ್ಧಿ ಸಚಿವರು) : ಮಾನ್ಯ ಅಧ್ಯಕ್ಷರೆ, ಮಂಗಳೂರು ನಗರಕ್ಕೆ ನೀರು ಸರಬರಾಜು ವ್ಯವಸ್ಥೆಯನ್ನು ಕರ್ನಾಟಕ ರಾಜ್ಯ ನಗರ ನೀರು ಸರಬರಾಜು ಹಾಗೂ ಒಳಚರಂಡಿ ಮಂಡಲಿಯುವರು ಬಲ್ಕ್ ಆಧಾರದ ಮೇಲೆ ಸರಬರಾಜು ಮಾಡುತ್ತಿದ್ದಾರೆ. ಈ ಯೋಜನೆಗೆ ಅಳವಡಿಸಿರುವ ಪಂಪುಗಳು ಹಳೆಯವುಗಳಾಗಿದ್ದು ಅವುಗಳಿಂದ ಪಂಪು ಮಾಡುವ ಪ್ರಮಾಣ ಕಡಿಮೆಯಾಗಿದೆ. ಸುಮಾರು 18 ಎಂ.ಜಿ.ಡಿ. ಪಂಪ್ ಮಾಡುವ ಬದಲು ಕೇವಲ 13-14 ಎಂ.ಜಿ.ಡಿ. ಮಾತ್ರ ಪಂಪ್ ಮಾಡಲು ಸಾಧ್ಯವಾಗಿದೆ. ಇದಲ್ಲದೆ ವಿದ್ಯುಚ್ಛಕ್ತಿ ಸರಬರಾಜಿನಲ್ಲಿ ವ್ಯತ್ಯಯ ಆಗುತ್ತಿರುವುದರಿಂದ ಈ ಪ್ರಮಾಣದಲ್ಲಿ ಪಂಪ್ ಮಾಡಲು ಸಾಧ್ಯವಾಗುತ್ತಿಲ್ಲ. ಇದನ್ನು ಗಮನದಲ್ಲಿಟ್ಟುಕೊಂಡು ಹೊಸ ಪಂಪುಗಳನ್ನು ಅಳವಡಿಸಲು 100 ಲಕ್ಷ ರೂಪಾಯಿಗಳ ಒಂದು ಅಂದಾಜನ್ನು ತಯಾರಿಸಲಾಗಿದ್ದು, ಈ ಅಂದಾಜಿಗೆ ಸರ್ಕಾರವು ತಾತ್ವಿಕವಾಗಿ ಅನುಮೋದನೆಯನ್ನು ಆಗಸ್ಟ್ 1994ರಲ್ಲಿ ನೀಡಲಾಗಿದೆ. ಈ ಯೋಜನೆಗೆ ಹುಡ್ಕೋದವರಿಂದ ಆರ್ಥಿಕ ನೆರವನ್ನು ನೀಡಿದ ಮೇಲೆ ಈ ಕೆಲಸವನ್ನು ಪ್ರಾರಂಭಿಸಲಾಗುವುದು. ಇದೂ ಅಲ್ಲದೆ ಮಂಗಳೂರು ನಗರದಲ್ಲಿನ ವಿತರಣಾ ವ್ಯವಸ್ಥೆಯನ್ನು ಅಭಿವೃದ್ಧಿ ಪಡಿಸಲು 14 ಕೋಟಿ ರೂಪಾಯಿಗಳ ಅಂದಾಜನ್ನು ತಯಾರು ಮಾಡಲಾಗಿದ್ದು, ಅಂದಾಜಿಗೆ ಮಂಜೂರಾತಿ ನೀಡಲಾಗಿದೆ. ಕೆಲಸ ಪ್ರಗತಿಯಲ್ಲಿದೆ. ಇದುವರೆವಿಗೂ ಈ ಯೋಜನೆಗೆ ಸುಮಾರು 1.70 ಕೋಟಿ ರೂಪಾಯಿಗಳು ಖರ್ಚಾಗಿವೆ. ಈ ಯೋಜನೆಗೆ 1994-95ರ ಬಜೆಟ್ ನಲ್ಲಿ 300 ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ. ಇದೂ ಅಲ್ಲದೆ ಎಲ್.ಐ.ಸಿ.ಯಿಂದಲೂ ಹಣವನ್ನು ಭರಿಸಲಿದೆ. ಹಾಗೂ ಈ ಕೆಲಸವನ್ನು ಪ್ರಗತಿಯಲ್ಲಿಡಲಾಗಿದೆ ಎಂದು ತಿಳಿಸಲಿಚ್ಛಿಸುತ್ತೇನೆ.

3. ಹುಬ್ಬಳ್ಳಿ ವಿಭಾಗದ ಹಿರೇಕೇರೂರು, ಹಾವೇರಿ, ರಾಣೆಬೆನ್ನೂರು ಡಿಪೋಗಳ ಬಸ್ಸುಗಳು ನಿಗದಿತ ವೇಳೆಗೆ ಓಡಿಸುವುದರ ಬಗ್ಗೆ

ಶ್ರೀ ಯು.ಬಿ. ಬಣಕಾರ್ (ಹಿರೇಕೇರೂರು) : ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಹುಬ್ಬಳ್ಳಿ ವಿಭಾಗದ ಹಿರೇಕೇರೂರು, ಹಾವೇರಿ ಮತ್ತು ರಾಣೆಬೆನ್ನೂರು ಡಿಪೋಗಳ ಬಸ್ಸುಗಳು ನಿಗದಿತ ವೇಳೆಗೆ ಸರಿಯಾಗಿ ಓಡಿಸುವುದಿಲ್ಲ, ಒಂದು ತಾಸಿನಿಂದ 5 ತಾಸಿನವರೆಗೆ ತಡವಾಗಿ ಓದುತ್ತಿವೆ. ಒಂದೊಂದು ದಿವಸ ಬಸ್ಸುಗಳನ್ನು ರದ್ದು ಮಾಡಲಾಗುತ್ತಿದೆ. ಹಾಗೆಯೇ ಯಾವ ಊರಿಗೆ ಹೋಗಬೇಕಾಗಿತ್ತೋ ಆ ಊರಿಗೆ ಹೋಗದೆ ಮಧ್ಯದಲ್ಲೇ ವಾಪಸ್ಸು ಬರುವ ಪದ್ಧತಿ ಸುಮಾರು ದಿವಸಗಳಿಂದ ನಡೆದುಕೊಂಡು ಬರುತ್ತಿದೆ. ಆದ್ದರಿಂದ ಮಾನ್ಯ ಸಾರಿಗೆ ಸಚಿವರು ಹಾಗೂ ಸರ್ಕಾರ ಈ ಬಗ್ಗೆ ತೀವ್ರ ಕ್ರಮ ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಕೋರುತ್ತೇನೆ.

ಶ್ರೀ ಜೆ. ಎಚ್. ಪಟೇಲ್ (ಉಪ ಮುಖ್ಯ ಮಂತ್ರಿಗಳು) : ಮಾನ್ಯ ಸದಸ್ಯರು ಹೇಳಿರುವ ಹಾಗೆ ಕೆ.ಎಸ್.ಆರ್.ಟಿ.ಸಿ. ಬಸ್ಸುಗಳಿಂದ ಆಗತಕ್ಕ ತೊಂದರೆಯ ಬಗ್ಗೆ ಈಗಾಗಲೇ ಸರ್ಕಾರದ ಗಮನಕ್ಕೆ ಬಂದಿದೆ. ಸಂಬಂಧಪಟ್ಟ ಮಂತ್ರಿಗಳು ವಿಷಯವನ್ನು ಚರ್ಚೆ ಮಾಡುವುದಕ್ಕೋಸ್ಕರ ಹೋಗಿದ್ದಾರೆ. ಮಾನ್ಯ ಸದಸ್ಯರ ಆತಂಕವನ್ನು ನಿವಾರಣೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

4. ಪುತ್ತೂರು ತಾಲ್ಲೂಕಿನ ಉಪ್ಪಿನಂಗಡಿ ಹಾಗೂ ಪಾಣಾಲೆ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ವೈದ್ಯರ ಕೊರತೆ

ಶ್ರೀ ಡಿ.ಪಿ. ಸದಾನಂದ ಗೌಡ (ಪುತ್ತೂರು) : ಮಾನ್ಯ ಅಧ್ಯಕ್ಷರೆ, ಪುತ್ತೂರು ತಾಲ್ಲೂಕಿನ ಉಪ್ಪಿನಂಗಡಿ ಹಾಗೂ ಪಾಣಾಜೆ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ